2018 ಕ.ತೀ.ವ 1651

**ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ರಾಘವೇಂದ್ರ ಎಸ್. ಚೌಹಾಣ್**
**ಮತ್ತು**
**ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಚ್.ಟಿ. ನರೇಂದ್ರ ಪ್ರಸಾದ್**

## ಯುನೈಟೆಡ್ ಇಂಡಿಯಾ ಇನ್‌ಶೂರೆನ್ಸ್ ಕಂ. –ವಿರುದ್ಧ– ಶ್ರೀ ಸಿದ್ಧಲಿಂಗಯ್ಯ ಮತ್ತು ಇತರರು*

ಮೋಟಾರು ವಾಹನಗಳ ಅಧಿನಿಯಮದ 173(1)ನೇ ಪ್ರಕರಣದ ಮೇರೆಗಿನ ಸಂಕೀರ್ಣ ಮೊದಲ ಅಪೀಲು.

ಯುನೈಟೆಡ್ ಇಂಡಿಯಾ ಇನ್‌ಶೂರೆನ್ಸ್ ಕಂ.ಲಿ., ಸಣ್ಣ ವ್ಯಾಜ್ಯಗಳು ಹಾಗೂ ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣ, ಬೆಂಗಳೂರು (ಎಸ್‌ಸಿಸಿಎಚ್–16) ಹೊರಡಿಸಿ, ಅದರ ಮೂಲಕ ಕ್ಲೇಮುದಾರರಾದ – ಪ್ರತ್ಯರ್ಜಿದಾರ ಸಂಖ್ಯೆ 1 ಹಾಗೂ 2 ರವರುಗಳ ಮಗ ಮಹಾಲಿಂಗನ ಮರಣಕ್ಕೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಧಿಕರಣವು, ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಹಣ ಅವರ ಕೈ ಸೇರುವವರೆಗೆ 15,71,000/–ರೂ.ಗಳ ಪರಿಹಾರವನ್ನು ವಾರ್ಷಿಕ ಶೇಕಡಾ 9ರ ಬಡ್ಡಿ ದರದಲ್ಲಿ ಪರಿಹಾರದ ಮೊಬಲಗನ್ನು ನೀಡಿರುವ ದಿನಾಂಕ 5.11.2016ರ ಐತೀರ್ಪಿನ ಕಾನೂನಾತ್ಮಕತೆಯನ್ನು ಪ್ರಶ್ನಿಸಿರುತ್ತದೆ.

ಸಂಕ್ಷಿಪ್ತವಾದ ಪ್ರಕರಣದ ವಾಸ್ತವಾಂಶಗಳು ಈ ಮುಂದಿನಂತಿರುತ್ತವೆ: ದಿನಾಂಕ 19.8.2014ರಂದು ರಾತ್ರಿ ಸುಮಾರು 9.30 ಗಂಟೆಗೆ ಶ್ರೀ ಮಹಾಲಿಂಗ, ಕಾಳೇಗೌಡನ ದೊಡ್ಡಿಗ್ರಾಮದಿಂದ ಶಿವನಹಳ್ಳಿಗೆ ಮೋಟಾರು ಸೈಕಲಿನಲ್ಲಿ ಬರುತ್ತಿರುತ್ತಾನೆ. ಆತ ಕನಕಪುರ – ಸಾತನೂರು ಮುಖ್ಯರಸ್ತೆಯ ಶಿವನಹಳ್ಳಿ ಜಂಕ್ಷನ್ ರಸ್ತೆಯನ್ನು ತಲುಪುತ್ತಿರುವಾಗ,

*ಸಂಕೀರ್ಣ ಮೊದಲ ಅಪೀಲು ಸಂಖ್ಯೆ: 1322/2017 (ಎಂ.ವಿ) ದಿನಾಂಕ 28ನೇ ಜೂನ್, 2018.

ಇದ್ದಕ್ಕಿದ್ದ ಹಾಗೆ ಕೆಎ–42–ಆರ್–6415 ನೋಂದಣಿ ಸಂಖ್ಯೆಯನ್ನು ಹೊಂದಿರುವ ಮೋಟಾರು ಸೈಕಲನ್ನು ಕಾಳೇಗೌಡನ ದೊಡ್ಡಿ ಗ್ರಾಮದ ದಿಕ್ಕಿನಿಂದ ತುಂಬಾ ಅಸಡ್ಡೆ ಹಾಗೂ ನಿರ್ಲಕ್ಷ್ಯದಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆಯ ತೀರ ಎಡಬದಿಯಿಂದ ಬಂದು ಮಹಾಲಿಂಗ ಚಾಲನೆ ಮಾಡುತ್ತಿದ್ದ ಮೋಟಾರು ಸೈಕಲಿಗೆ ಡಿಕ್ಕಿ ಹೊಡೆದಿರುತ್ತಾನೆ. ತರುವಾಯ, ಮಹಾಲಿಂಗ ಮಾರಣಾಂತಿಕವಾಗಿ ಗಾಯಗೊಂಡು, ಆಸ್ಪತ್ರೆಗೆ ಹೋಗುವ ಮಾರ್ಗಮಧ್ಯೆಯಲ್ಲಿ ಮೃತ ಪಟ್ಟಿರುತ್ತಾನೆ.

ಅಪಘಾತದಲ್ಲಿ ಮೂರು ಮೋಟಾರು ವಾಹನಗಳು ಒಳಗೊಂಡಿದ್ದರಿಂದ, ಸದರಿ ಅಪಘಾತದಲ್ಲಿ ತಮ್ಮ ಸಂಬಂಧಿಗಳನ್ನು ಕಳೆದುಕೊಂಡಂಥ ಇತರರೊಂದಿಗೆ ವಾಹನ ಅಪಘಾತದಲ್ಲಿ ತಮ್ಮ ಮಗನನ್ನು ಕಳೆದುಕೊಂಡ ತಂದೆ–ತಾಯಿಯರು ಬೇರೆ ಬೇರೆ ಕ್ಲೇಮುದಾರರು ಮಾನ್ಯ ನ್ಯಾಯಾಧಿಕರಣದ ಮುಂದೆ ಮೂರು ಬೇರೆ ಬೇರೆ ಕ್ಲೇಮು ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ದಿನಾಂಕ 5.11.2016ರ ಒಂದೇ ಐತೀರ್ಪಿನಿಂದ, ಮೂರು ಕ್ಲೇಮು ಅರ್ಜಿಗಳನ್ನು ಮೇಲೆ ನಮೂದಿಸಿದಂತೆ ಒಟ್ಟಿಗೆ ನಿರ್ಧರಣೆ ಮಾಡಿರುತ್ತಾರೆ. ಸಾಕ್ಷ್ಯವನ್ನು ವಿವೇಚಿಸಿದ ತರುವಾಯ, ಮಾನ್ಯ ನ್ಯಾಯಾಧಿಕರಣವು ಕ್ಲೇಮುದಾರ – ಪ್ರತ್ಯರ್ಜಿದಾರ ಸಂಖ್ಯೆ.1 ಹಾಗೂ 2 ರವರುಗಳಿಗೆ 15,71,000/– ಪರಿಹಾರವನ್ನು ನೀಡಿರುತ್ತಾರೆ. ಹಾಗಾಗಿ, ಐತೀರ್ಪು ಹಣವನ್ನು ಕಡಿತಗೊಳಿಸಲು ಕೋರಿ ವಿಮಾ ಕಂಪನಿಯು ಈ ಅಪೀಲನ್ನು ಸಲ್ಲಿಸಿದೆ.

'ಜೀವಮಾನ ನಿರೀಕ್ಷೆಯ ನಷ್ಟ' ಪ್ರವರ್ಗದಡಿಯಲ್ಲಿ 1,00,000/– ರೂ.ಗಳು ಹಾಗೂ 'ವೈವಾಹಿಕ ಪ್ರತೀಕ್ಷೆಗಳ ನಷ್ಟ'ದ ಪ್ರವರ್ಗದಡಿಯಲ್ಲಿ 50,000/–ರೂ.ಗಳ ಪರಿಹಾರವನ್ನು ನೀಡುವಾಗ, ಮಾನ್ಯ ನ್ಯಾಯಾಧಿಕರಣವು ಕ್ಲೇಮು ಅರ್ಜಿಯನ್ನು ಮರಣದ ಪ್ರಕರಣಕ್ಕಿಂತ ಗಾಯಗೊಂಡ ಪ್ರಕರಣದಂತೆ ಪರಿಗಣಿಸಿರುತ್ತದೆಂದು ಕಂಡು ಬರುತ್ತದೆ. ಅಪಘಾತದಲ್ಲಿ ಮಹಾಲಿಂಗ ಮರಣಹೊಂದಿರುವುದರಿಂದ ಈ ಎರಡೂ ಪ್ರವರ್ಗಗಳಡಿಯಲ್ಲಿ ಯಾವುದೇ ಪರಿಹಾರವನ್ನು ಖಂಡಿತ ಸಂದಾಯ ಮಾಡಬೇಕಾಗಿರುವುದಿಲ್ಲ. ಈ ಎರಡೂ ಪ್ರವರ್ಗಗಳು ಗಾಯಗೊಂಡ ಪ್ರಕರಣಗಳಿಗೆ ಸಮುಚಿತವಾದವುಗಳಾಗಿರುವುದಿಲ್ಲ. ಆದ್ದರಿಂದ, 'ಜೀವಮಾನದ ನಿರೀಕ್ಷೆಯ ನಷ್ಟ' ಪ್ರವರ್ಗದಡಿಯಲ್ಲಿ 1,00,000/–ರೂ.ಗಳ ಹಾಗೂ 'ವೈವಾಹಿಕ ಪ್ರತೀಕ್ಷೆಗಳ ನಷ್ಟ'

**ಪ್ರವರ್ಗದಡಿಯಲ್ಲಿ ೫೦,೦೦೦/– ರೂಪಾಯಿಗಳ ಕ್ಲೇಮುದಾರ – ಪ್ರತ್ಯರ್ಜಿದಾರರಿಗೆ ಪರಿಹಾರ ನೀಡಿರುವುದು ಕಾನೂನುಬದ್ಧವಾಗಿ ಸಮರ್ಥನೀಯವಾಗಿರುವುದಿಲ್ಲ ಎಂದು ಅಭಿಪ್ರಾಯಪಟ್ಟು ಅಪೀಲನ್ನು ಅಂಗೀಕರಿಸಿದೆ.**

***ಉಲ್ಲೇಖಿಸಲಾದ ಮೊಕದ್ದಮೆ*** ***ಪ್ಯಾರಾದಲ್ಲಿ***

*1. (2017) 16 ಎಸ್‌ಸಿಸಿ 680*
*ನ್ಯಾಷನಲ್ ಇನ್‌ಶೂರೆನ್ಸ್ ಕಂಪನಿ ಲಿಮಿಟೆಡ್ –ವಿರುದ್ಧ–*
*ಪ್ರಣಯ್ ಸೇಥಿ ಹಾಗೂ ಇತರರು (ಪ್ಯಾರಾ) 4*

ಅರ್ಜಿದಾರರ ಪರ: ಶ್ರೀ ಅನೂಪ್ ಸೀತಾರಾಮ್‌ರಾವ್, ವಕೀಲರು;
ಪ್ರತ್ಯರ್ಜಿದಾರರ ಪರ: ಶ್ರೀ ಪ್ರಕಾಶ್ ಎಂ.ಎಚ್., ವಕೀಲರು.

**ತೀರ್ಪು**

**ನ್ಯಾಯಮೂರ್ತಿ ಶ್ರೀ ರಾಘವೇಂದ್ರ ಎಸ್. ಚವ್ಹಾಣ್:**

ಯುನೈಟೆಡ್ ಇಂಡಿಯಾ ಇನ್‌ಶೂರೆನ್ಸ್ ಕಂ.ಲಿ., ಸಣ್ಣ ವ್ಯಾಜ್ಯಗಳು ಹಾಗೂ ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣ, ಬೆಂಗಳೂರು (ಎಸ್‌ಸಿಸಿಎಚ್–16) ಹೊರಡಿಸಿ, ಅದರ ಮೂಲಕ ಕ್ಲೇಮುದಾರರಾದ – ಪ್ರತ್ಯರ್ಜಿದಾರ ಸಂಖ್ಯೆ 1 ಹಾಗೂ 2 ರವರುಗಳ ಮಗ ಮಹಾಲಿಂಗನ ಮರಣಕ್ಕೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಧಿಕರಣವು, ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಹಣ ಅವರ ಕೈ ಸೇರುವವರೆಗೆ 15,71,000/–ರೂ.ಗಳ ಪರಿಹಾರವನ್ನು ವಾರ್ಷಿಕ ಶೇಕಡಾ 9ರ ಬಡ್ಡಿ ದರದಲ್ಲಿ ಪರಿಹಾರದ ಮೊಬಲಗನ್ನು ನೀಡಿರುವ ದಿನಾಂಕ 5.11.2016ರ ಐತೀರ್ಪಿನ ಕಾನೂನಾತ್ಮಕತೆಯನ್ನು ಪ್ರಶ್ನಿಸಿರುತ್ತದೆ.

2. ಸಂಕ್ಷಿಪ್ತವಾದ ಪ್ರಕರಣದ ವಾಸ್ತವಾಂಶಗಳು ಈ ಮುಂದಿನಂತಿರುತ್ತವೆ: ದಿನಾಂಕ 19.8.2014ರಂದು ರಾತ್ರಿ ಸುಮಾರು 9.30 ಗಂಟೆಗೆ ಶ್ರೀ ಮಹಾಲಿಂಗ, ಕಾಳೇಗೌಡನದೊಡ್ಡಿಗ್ರಾಮದಿಂದ ಶಿವನಹಳ್ಳಿಗೆ ಮೋಟಾರು ಸೈಕಲಿನಲ್ಲಿ ಬರುತ್ತಿರುತ್ತಾನೆ. ಆತ ಕನಕಪುರ – ಸಾತನೂರು ಮುಖ್ಯರಸ್ತೆಯ ಶಿವನಹಳ್ಳಿ ಜಂಕ್ಷನ್ ರಸ್ತೆಯನ್ನು ತಲುಪುತ್ತಿರುವಾಗ, ಇದ್ದಕ್ಕಿದ್ದ ಹಾಗೆ ಕೆಎ–42–ಆರ್–6415 ನೋಂದಣಿ ಸಂಖ್ಯೆಯನ್ನು ಹೊಂದಿರುವ ಮೋಟಾರು ಸೈಕಲನ್ನು ಕಾಳೇಗೌಡನ ದೊಡ್ಡಿ ಗ್ರಾಮದ ದಿಕ್ಕಿನಿಂದ ತುಂಬಾ ಅಸಡ್ಡೆ ಹಾಗೂ ನಿರ್ಲಕ್ಷ್ಯದಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆಯ ತೀರ ಎಡಬದಿಯಿಂದ ಬಂದು ಮಹಾಲಿಂಗ ಚಾಲನೆ ಮಾಡುತ್ತಿದ್ದ ಮೋಟಾರು ಸೈಕಲಿಗೆ ಡಿಕ್ಕಿ ಹೊಡೆದಿರುತ್ತಾನೆ. ತರುವಾಯ, ಮಹಾಲಿಂಗ ಮಾರಣಾಂತಿಕವಾಗಿ ಗಾಯಗೊಂಡು, ಆಸ್ಪತ್ರೆಗೆ ಹೋಗುವ ಮಾರ್ಗಮಧ್ಯೆಯಲ್ಲಿ ಮೃತ ಪಟ್ಟಿರುತ್ತಾನೆ.

3. ಅಪಘಾತದಲ್ಲಿ ಮೂರು ಮೋಟಾರು ವಾಹನಗಳು ಒಳಗೊಂಡಿದ್ದರಿಂದ, ಸದರಿ ಅಪಘಾತದಲ್ಲಿ ತಮ್ಮ ಸಂಬಂಧಿಗಳನ್ನು ಕಳೆದುಕೊಂಡಂಥ ಇತರರೊಂದಿಗೆ ವಾಹನ ಅಪಘಾತದಲ್ಲಿ ತಮ್ಮ ಮಗನನ್ನು ಕಳೆದುಕೊಂಡ ತಂದೆ–ತಾಯಿಯರು ಬೇರೆ ಬೇರೆ ಕ್ಲೇಮುದಾರರು ಮಾನ್ಯ ನ್ಯಾಯಾಧಿಕರಣದ ಮುಂದೆ ಮೂರು ಬೇರೆ ಬೇರೆ ಕ್ಲೇಮು ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ದಿನಾಂಕ 5.11.2016ರ ಒಂದೇ ಐತೀರ್ಪಿನಿಂದ, ಮೂರು ಕ್ಲೇಮು ಅರ್ಜಿಗಳನ್ನು ಮೇಲೆ ನಮೂದಿಸಿದಂತೆ ಒಟ್ಟಿಗೆ ನಿರ್ಧರಣೆ ಮಾಡಿರುತ್ತಾರೆ. ಸಾಕ್ಷ್ಯವನ್ನು ವಿವೇಚಿಸಿದ ತರುವಾಯ, ಮಾನ್ಯ ನ್ಯಾಯಾಧಿಕರಣವು ಕ್ಲೇಮುದಾರ – ಪ್ರತ್ಯರ್ಜಿದಾರ ಸಂಖ್ಯೆ.1 ಹಾಗೂ 2 ರವರುಗಳಿಗೆ 15,71,000/– ಪರಿಹಾರವನ್ನು ನೀಡಿರುತ್ತಾರೆ. ಹಾಗಾಗಿ, ಐತೀರ್ಪು ಹಣವನ್ನು ಕಡಿತಗೊಳಿಸಲು ಕೋರಿ ವಿಮಾ ಕಂಪನಿಯು ಈ ಅಪೀಲನ್ನು ಸಲ್ಲಿಸಿದೆ.

4. ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳಾದ ಶ್ರೀಯುತ ಅನೂಪ್ ಸೀತಾರಾಮ್‌ರಾವ್ ರವರು ಈ ನ್ಯಾಯಾಲಯದ ಮುಂದೆ ಈ ಮುಂದಿನ ವಾದಗಳನ್ನು ಪ್ರಸ್ತಾಪಿಸಿರುತ್ತಾರೆ:–

ಮೊದಲನೆಯದಾಗಿ, ಇದು ಮರಣದ ಪ್ರಕರಣವಾಗಿರುವುದರಿಂದ, 'ಜೀವಮಾನ ನಿರೀಕ್ಷೆಯ ನಷ್ಟ' ಹಾಗೂ 'ವೈವಾಹಿಕ ಪ್ರತೀಕ್ಷೆಗಳ ನಷ್ಟ'ದ ಪ್ರವರ್ಗಕ್ಕೆ ಸಂಬಂಧಿಸಿದಂತೆ ಪರಿಹಾರವನ್ನು ನೀಡಿರುವಲ್ಲಿ ಮಾನ್ಯ ನ್ಯಾಯಾಧಿಕರಣದ ನಡೆ ಸಮರ್ಥನೀಯವಾಗಿರುವುದಿಲ್ಲ. ವಾಸ್ತವವಾಗಿ, ಮಾನ್ಯ ನ್ಯಾಯಾಧಿಕರಣವು, ಪ್ರಕರಣವನ್ನು ಮರಣದ ಪ್ರಕರಣಕ್ಕಿಂತ ಗಾಯಗೊಂಡ ಪ್ರಕರಣವೆಂದು ಪರಿಗಣಿಸಿರುತ್ತದೆ. ಆದ್ದರಿಂದ, ಈ ಎರಡು ಪ್ರವರ್ಗಗಳಡಿಯಲ್ಲಿ ಕ್ಲೇಮುದಾರರಿಗೆ ಐತೀರ್ಪು ನೀಡಿದ ಪರಿಹಾರವನ್ನು ರದ್ದುಪಡಿಸಬೇಕು.

ಎರಡನೆಯದಾಗಿ, ***ನ್ಯಾಷನಲ್ ಇನ್‌ಶೂರೆನ್ಸ್ ಕಂಪನಿ ಲಿಮಿಟೆಡ್ –ವಿರುದ್ಧ– ಪ್ರಣಯ್ ಸೇಥಿ ಹಾಗೂ ಇತರರು***[1] ಪ್ರಕರಣವನ್ನು ಉದಾಹರಿಸಿ, ಮಾನ್ಯ ನ್ಯಾಯವಾದಿಗಳು ಅವಿವಾಹಿತನ ಮರಣದ ಸಂದರ್ಭದಲ್ಲಿ, ತಂದೆ ತಾಯಿಯರು, 'ಪ್ರೀತಿ–ವಾತ್ಸಲ್ಯದ ನಷ್ಟ' ಪ್ರವರ್ಗದಲ್ಲಿ ಯಾವುದೇ ಪರಿಹಾರವನ್ನು ಸ್ವೀಕರಿಸಲು ಹಕ್ಕುಳ್ಳವರಾಗಿರುವುದಿಲ್ಲವೆಂದೂ ವಾದಿಸಿರುತ್ತಾರೆ. ತನ್ನ ವಾದದ ಸಮರ್ಥನೆಗೆ, ಮಾನ್ಯ ನ್ಯಾಯವಾದಿಗಳು, ಸದರಿ ತೀರ್ಪಿನ 61(viii) ಪ್ಯಾರಾದ ಕಡೆಗೆ ಈ ನ್ಯಾಯಾಲಯದ ಗಮನವನ್ನು ಸೆಳೆಯಲು ಪ್ರಯತ್ನಿಸಿರುತ್ತಾರೆ. ಮಾನ್ಯ ನ್ಯಾಯವಾದಿಗಳು, ಈ ಪ್ಯಾರಾದಲ್ಲಿ, ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು, "ಸಾಂಪ್ರದಾಯಿಕ ಶೀರ್ಷಿಕೆಗಳ ಯುಕ್ತ ಅಂಕಿಅಂಶಗಳು" ಎಂದರೆ, *'ಸಂಪದದ ನಷ್ಟ' ಹಾಗೂ 'ಸಾಂಗತ್ಯದ ನಷ್ಟ' ಹಾಗೂ 'ಅಂತಿಮ ಸಂಸ್ಕಾರದ ವೆಚ್ಚಗಳು ಅನುಕ್ರಮವಾಗಿ 15,000/– ರೂ. 40,000/– ಹಾಗೂ 15,000/– ರೂ.ಗಳಾಗಿರಬೇಕೆಂದು ಮೇಲಿನ ಮೊಬಲಗುಗಳು ಪ್ರತೀ ಮೂರು ವರ್ಷಗಳಿಗೆ ಶೇ.10ರ ದರದಲ್ಲಿ ಹೆಚ್ಚಾಗಬೇಕೆಂದು ಸ್ಪಷ್ಟವಾಗಿ ಅಭಿಪ್ರಾಯಪಟ್ಟಿದೆಯೆಂದು* ವಾದಿಸಿರುತ್ತಾರೆ. ಮಾನ್ಯ ನ್ಯಾಯವಾದಿಗಳ ಪ್ರಕಾರ, ಸಾಂಪ್ರದಾಯಿಕ ಶೀರ್ಷಿಕೆಗಳಡಿಯಲ್ಲಿ, 'ಪ್ರೀತಿ–ವಾತ್ಸಲ್ಯದ ನಷ್ಟ'ದ ಪ್ರವರ್ಗವನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸದರಿ ಪ್ಯಾರಾದಲ್ಲಿ ನಮೂದಿಸದಿರುವುದರಿಂದ, ಕ್ಲೇಮುದಾರರು

1. (2017) 16 ಎಸ್‌ಸಿಸಿ 680

ಅನುಭವಿಸುತ್ತಿರುವ ಪ್ರೀತಿ–ವಾತ್ಸಲ್ಯ ನಷ್ಟಕ್ಕೆ ಸಂಬಂಧಿಸಿದಂತೆ ಒಂದು ಕವಡೆ ಕಾಸನ್ನು ನೀಡಬಾರದೆಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿರುವುದನ್ನು ಎತ್ತಿಹಿಡಿಯಬೇಕಾಗುತ್ತದೆ. ಆದ್ದರಿಂದ, ಅವರ ಪ್ರಕಾರ, 'ಪ್ರೀತಿ–ವಾತ್ಸಲ್ಯ ನಷ್ಟ'ದ ಪ್ರವರ್ಗದಡಿಯಲ್ಲಿ ಕ್ಲೇಮುದಾರ ಪ್ರತ್ಯರ್ಜಿದಾರರಿಗೆ 1,00,000/– ರೂ.ಗಳ ಪರಿಹಾರವನ್ನು ನ್ಯಾಯಾಧಿಕರಣವು ಮಂಜೂರು ಮಾಡಿರುವುದು ಸಮರ್ಥನೀಯವಾಗಿರುವುದಿಲ್ಲ. ಹಾಗಾಗಿ, ಮಾನ್ಯ ನ್ಯಾಯವಾದಿಗಳ ಪ್ರಕಾರ, ಪ್ರಶ್ನಿತ ಐತೀರ್ಪಿಗೆ ಸಂಬಂಧಿಸಿದಂತೆ ಈ ನ್ಯಾಯಾಲಯದಲ್ಲಿ ಮಧ್ಯೆ ಪ್ರವೇಶಿಸಬೇಕಾಗಿರುತ್ತದೆ.

5. ಮತ್ತೊಂದು ಕಡೆ, ಕ್ಲೇಮುದಾರ–ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳಾದ ಶ್ರೀಯುತ ಎಂ.ಎಚ್. ಪ್ರಕಾಶ್‌ರವರು, ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು 'ನಿರೀಕ್ಷಣಾ ನಷ್ಟ' ಹಾಗೂ 'ವೈವಾಹಿಕ ಪ್ರತೀಕ್ಷಾ ನಷ್ಟ' ಗಳೆಂಬ ಪ್ರವರ್ಗದ ಅಡಿಯಲ್ಲಿ ಯಾವುದೇ ಪರಿಹಾರವನ್ನು ಕ್ಲೇಮು ಮಾಡುವಂತಿಲ್ಲವೆಂದು ವಾದಿಸಿರುವುದು ಸಮರ್ಥನೀಯವಾಗಿದ್ದಾಗ್ಯೂ, 'ಪ್ರೀತಿ–ವಾತ್ಸಲ್ಯದ ನಷ್ಟ' ಪ್ರವರ್ಗದಡಿಯಲ್ಲಿ ಯಾವುದೇ ಪರಿಹಾರವನ್ನು ಸಂದಾಯ ಮಾಡಬೇಕಾದ ಅವಶ್ಯಕತೆಯಿಲ್ಲವೆಂದು ವಾದಿಸಿರುವುದು ಅಸಮರ್ಥನೀಯವಾದುದಾಗಿರುತ್ತದೆಂದು ನಿವೇದಿಸಿಕೊಂಡಿರುತ್ತಾರೆ. ಮಾನ್ಯ ನ್ಯಾಯವಾದಿಗಳ ಪ್ರಕಾರ, ***ಪ್ರಣಯ್ ಸೇಥಿ*** (ಮೇಲೆ ಹೇಳಿದ) ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಯಾವುದೇ ನಿಷೇದವನ್ನು ಗೊತ್ತುಪಡಿಸದಿರುವುದರಿಂದ ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು ನೀಡಿದ ಅರ್ಥ ವಿವರಣೆಯ ಹೆಚ್ಚಿನ ಮಟ್ಟದಲ್ಲಿ ದಿಕ್ಕು ತಪ್ಪಿಸುವಂಥದಾಗಿದೆಯೆಂದು ಸಹ ನಿವೇದಿಸಿಕೊಂಡಿರುತ್ತಾರೆ.

6. ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳ ವಾದವನ್ನು ಆಲಿಸಿ, ಪ್ರಶ್ನಿತ ಐತೀರ್ಪನ್ನು ಪರಿಶೀಲಿಸಿರುತ್ತೇವೆ.

7. 'ಜೀವಮಾನ ನಿರೀಕ್ಷೆಯ ನಷ್ಟ' ಪ್ರವರ್ಗದಡಿಯಲ್ಲಿ 1,00,000/– ರೂ.ಗಳು ಹಾಗೂ 'ವೈವಾಹಿಕ ಪ್ರತೀಕ್ಷೆಗಳ ನಷ್ಟ'ದ ಪ್ರವರ್ಗದಡಿಯಲ್ಲಿ 50,000/–ರೂ.ಗಳ ಪರಿಹಾರವನ್ನು ನೀಡುವಾಗ, ಮಾನ್ಯ ನ್ಯಾಯಾಧಿಕರಣವು ಕ್ಲೇಮು ಅರ್ಜಿಯನ್ನು ಮರಣದ ಪ್ರಕರಣಕ್ಕಿಂತ ಗಾಯಗೊಂಡ ಪ್ರಕರಣದಂತೆ ಪರಿಗಣಿಸಿರುತ್ತದೆಂದು ಕಂಡು ಬರುತ್ತದೆ. ಅಪಘಾತದಲ್ಲಿ ಮಹಾಲಿಂಗ ಮರಣಹೊಂದಿರುವುದರಿಂದ ಈ ಎರಡೂ ಪ್ರವರ್ಗಗಳಡಿಯಲ್ಲಿ ಯಾವುದೇ ಪರಿಹಾರವನ್ನು ಖಂಡಿತ ಸಂದಾಯ ಮಾಡಬೇಕಾಗಿರುವುದಿಲ್ಲ. ಈ ಎರಡೂ ಪ್ರವರ್ಗಗಳು ಗಾಯಗೊಂಡ ಪ್ರಕರಣಗಳಿಗೆ ಸಮುಚಿತವಾದವುಗಳೇ ಹೊರತು ಮರಣದ ಪ್ರಕರಣಕ್ಕೆ ಸಮುಚಿತವಾದವುಗಳಾಗಿರುವುದಿಲ್ಲ. ಆದ್ದರಿಂದ, 'ಜೀವಮಾನದ ನಿರೀಕ್ಷೆಯ ನಷ್ಟ' ಪ್ರವರ್ಗದಡಿಯಲ್ಲಿ 1,00,000/–ರೂ.ಗಳ ಹಾಗೂ 'ವೈವಾಹಿಕ ಪ್ರತೀಕ್ಷೆಗಳ ನಷ್ಟ' ಪ್ರವರ್ಗದಡಿಯಲ್ಲಿ 50,000/– ರೂಪಾಯಿಗಳ ಕ್ಲೇಮುದಾರ – ಪ್ರತ್ಯರ್ಜಿದಾರರಿಗೆ ಪರಿಹಾರ ನೀಡಿರುವುದು ಕಾನೂನುಬದ್ಧವಾಗಿ ಸಮರ್ಥನೀಯವಾಗಿರುವುದಿಲ್ಲ.

8. ಕ್ಲೇಮುದಾರ – ಪ್ರತ್ಯರ್ಜಿದಾರರು, ತಮ್ಮ ಮಗನ ಅನಿರೀಕ್ಷಿತ ಸಾವಿನಿಂದ ತತ್ತರಿಸಿ, ಪ್ರೀತಿ – ವಾತ್ಸಲ್ಯ ನಷ್ಟಕ್ಕೆ ಸಂಬಂಧಿಸಿದಂತೆ ಯಾವುದೇ ಪರಿಹಾರವನ್ನು ಸ್ವೀಕರಿಸಲು ಹಕ್ಕುಳ್ಳವರಾಗಿರುವುದಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ, ಅಪೀಲುದಾರ ಪರ ಮಾನ್ಯ ನ್ಯಾಯವಾದಿಗಳು ನೀಡಿದ ಅರ್ಥ ವಿವರಣೆಯು ಈ ಮುಂದಿನ ಕಾರಣಗಳಿಗೆ ಸಂಬಂಧಪಟ್ಟಂತೆ ಸ್ಪಷ್ಟವಾಗಿ ಅಸಮರ್ಥನೀಯವಾಗಿರುತ್ತದೆ:

ಮೊದಲನೆಯದಾಗಿ, ***ಪ್ರಣಯ್ ಸೇಥಿ*** (ಈ ಹಿಂದೆ ಹೇಳಿದ) ಪ್ರಕರಣದಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಇತರೆ ಸಾಂಪ್ರದಾಯಿಕ ಶೀರ್ಷಿಕೆಗಳೊಂದಿಗೆ ವ್ಯವಹರಿಸುವಾಗ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಕೇವಲ ಮೂರು ಸಾಂಪ್ರದಾಯಿಕ ಶೀರ್ಷಿಕೆಗಳನ್ನು ಮಾತ್ರ ಅಂದರೆ, 'ಸಂಪದದ ನಷ್ಟ', 'ಸಾಂಗತ್ಯದ ನಷ್ಟ' ಹಾಗೂ 'ಅಂತಿಮ ಸಂಸ್ಕಾರದ ವೆಚ್ಚ'ಗಳನ್ನು ಮಾತ್ರ ನಮೂದಿಸಿರುತ್ತದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯವು, 'ಪ್ರೀತಿ–ವಾತ್ಸಲ್ಯ ನಷ್ಟ'ದ ಪ್ರವರ್ಗಕ್ಕೆ ಸಂಬಂಧಿಸಿದಂತೆ ಯಾವುದೇ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದಿಲ್ಲ ಹಾಗೂ

ಯಾವುದೇ ಗರಿಷ್ಠ ಮಿತಿಯನ್ನು ನಿಗದಿಪಡಿಸಿರುವುದಿಲ್ಲ. ಸದರಿ ಪ್ರವರ್ಗವನ್ನು ಕುರಿತಂತೆ ಸರ್ವೋಚ್ಚ ನ್ಯಾಯಾಲಯವು ಮೌನದಿಂದಿರುವುದರಿಂದ, ಸದರಿ ಸಾಂಪ್ರದಾಯಿಕ ಶೀರ್ಷಿಕೆಗಳಿಗೆ ನಕಾರಾತ್ಮಕವಾಗಿರುತ್ತದೆಂದು ಅರ್ಥೈಸುವಂತಿಲ್ಲ. ಮುಂದುವರೆದು, 'ಪ್ರೀತಿ–ವಾತ್ಸಲ್ಯ ನಷ್ಟ'ದ ಪ್ರವರ್ಗದಡಿಯಲ್ಲಿ ಸಂದಾಯ ಮಾಡಬೇಕಾದ ಪರಿಹಾರಕ್ಕೆ ಸಂಬಂಧಿಸಿದಂತೆ ಯಾವುದೇ ನಿಷೇಧವನ್ನು ನಿಗದಿಪಡಿಸದಿರುವುದರಿಂದ, ನಿಷೇಧಿಸುವುದಕ್ಕೆ ಸಂಬಂಧಿಸಿದಂತೆ ಈ ನ್ಯಾಯಾಲಯವು ಮಧ್ಯೆ ಪ್ರವೇಶಿಸಬೇಕಾಗಿರುವುದಿಲ್ಲ.

ಪ್ರಕರಣಗಳ ಸರಣಿಯಲ್ಲಿ, ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು, ನಿರ್ಣಯವನ್ನು, ಮಧ್ಯೆ ಪ್ರವೇಶಿಕೆಯೆಂದು ಓದಿಕೊಳ್ಳಬೇಕಾಗಿಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ. ಯಾವುದನ್ನು ಪ್ರಕರಣದ ಅನುಪಾತದಂತೆ ಸ್ಪಷ್ಟವಾಗಿ ಹೇಳಿರುವುದಿಲ್ಲವೋ, ಅದನ್ನು ಇಂಗಿತದ ಅನುಪಾತವೆಂದು ಓದಲಾಗುವುದಿಲ್ಲ. ಹಾಗಾಗಿ 'ಪ್ರೀತಿ–ವಾತ್ಸಲ್ಯ ನಷ್ಟ'ದ ಸಾಂಪ್ರದಾಯಿಕ ಶೀರ್ಷಿಕೆಗೆ ಸಂಬಂಧಿಸಿದಂತೆ ನಿಗದಿಪಡಿಸಬೇಕಾದ ಗರಿಷ್ಠ ಮಿತಿ ಕುರಿತ ಮೌನವು ಸದರಿ ಪ್ರವರ್ಗಕ್ಕೆ ಸಂಬಂಧಿಸಿದಂತೆ ಯಾವುದೇ ಗರಿಷ್ಠ ಮಿತಿಯಿರುವುದಿಲ್ಲವೆಂಬುದನ್ನು ಹೇಳುತ್ತದೆ. ಅದೇನೇ ಆಗಿದ್ದರೂ, ಸದರಿ ಪ್ರವರ್ಗಕ್ಕೆ ಸಂಬಂಧಿಸಿದಂತೆ ಯಾವುದೇ ಗರಿಷ್ಠ ಮಿತಿಯಿರುವುದಿಲ್ಲವೆಂಬುದನ್ನು ಹೇಳುತ್ತದೆ. ಅದೇನೇ ಆಗಿದ್ದರೂ, ಸದರಿ ಪ್ರವರ್ಗದಡಿಯಲ್ಲಿ ಸಂದಾಯ ಮಾಡಬಹುದಾದ ಪರಿಹಾರವು ನ್ಯಾಯಯುತವೂ ಸೂಕ್ತವೂ ಆದುದಾಗಿರುತ್ತದೆಯೇ ಹೊರತು ಒದಗಿ ಬಂದ ದೆಸೆಯಾಗಿರುವುದಿಲ್ಲ.

ಎರಡನೆಯದಾಗಿ, ವಯಸ್ಸಿಗೆ ಬಂದ ಮಗ ಅಥವಾ ಮಗಳ ಅನಿರೀಕ್ಷಿತ ಸಾವು ತಂದೆ–ತಾಯಿಯರಿಗೆ ಬಹಳ ದೊಡ್ಡ ಆಘಾತವನ್ನೇ ತರುತ್ತದೆ. ಒಂದು ಜನಪರ ನಂಬಿಕೆಯ ಪ್ರಕಾರ, ಒಬ್ಬರ ಜೀವನದ ಅತ್ಯಂತ ದೊಡ್ಡ ನೋವೆಂದರೆ, ಅವರ ಮೃತ ಮಗ ಅಥವಾ ಮಗಳ ಶವವನ್ನು ಮಣ್ಣಿಗಿಡುವುದಾಗಿರುತ್ತದೆ. ವೈದ್ಯ ವಿಜ್ಞಾನದ ಸಮೀಕ್ಷೆಯ ಪ್ರಕಾರ ಕೂಡ, ಇಂದು ಅತ್ಯಂತ ಆಳವಾದ

ಖಿನ್ನತೆಯಿಂದ ಬಳಲುತ್ತಿರುವವರು ಯಾರೆಂದರೆ ಅವರ ಮಕ್ಕಳನ್ನು ಅಕಾಲಿಕವಾಗಿ ಕಳೆದುಕೊಂಡ ತಂದೆ–ತಾಯಿಯಾಗಿರುತ್ತಾರೆ. ಹಾಗಾಗಿ, ಮಕ್ಕಳ ಹಠಾತ್ ನಿರ್ಗಮನವು ಉಂಟು ಮಾಡುವ ನಿರ್ವಾತವನ್ನು ಯಾವುದೇ ಹಣಕಾಸಿನ ಪರಿಹಾರವು ತುಂಬಲು ಸಾಧ್ಯವಾಗುವುದಿಲ್ಲ. ಆದರೂ, ಮಕ್ಕಳು ಈ ಲೋಕದಿಂದ ನಿರ್ಗಮಿಸಿ ಸೃಷ್ಟಿಸುವ ಭಾವನಾತ್ಮಕ ಶೂನ್ಯವನ್ನು ಸ್ವಲ್ಪಮಟ್ಟಿಗಾದರೂ ತುಂಬುವ ಸಲುವಾಗಿ, ತಂದೆ–ತಾಯಿಯರಿಗೆ ಹಣಕಾಸಿನ ಪರಿಹಾರವನ್ನು ಸಂದಾಯ ಮಾಡಬೇಕಾಗಿರುತ್ತದೆ. ಆದ್ದರಿಂದ, ಕವಡೆ ಕಾಸನ್ನು ತಂದೆ–ತಾಯಿಯರಿಗೆ ಸಂದಾಯ ಮಾಡಬೇಕಾದ ಅವಶ್ಯಕತೆ ಇರುವುದಿಲ್ಲವೆಂದು ಅಪೀಲುದಾರರ ಪರ ಮಾನ್ಯ ವಕೀಲರು ಎತ್ತಿದ ವಾದವು, ಒಪ್ಪಿಕೊಳ್ಳಲು ಸಾಧ್ಯವಿಲ್ಲವೆಂಬುದು ಸ್ಪಷ್ಟವಾಗಿರುತ್ತದೆ.

ಮೂರನೆಯದಾಗಿ, ಮೋಟಾರು ವಾಹನಗಳ ಅಧಿನಿಯಮವು ಸಾಮಾಜಿಕವಾಗಿ ಫಲಪ್ರದವಾಗಿರಬೇಕಾದ ಶಾಸನಾತ್ಮಕ ಅಂಶವಾಗಿರುತ್ತದೆ. ಇದನ್ನು ಕ್ಲೇಮುದಾರರ ಪರವಾಗಿ ಅಧಿನಿಯಮಿಸಲಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಪ್ರತಿಯೊಬ್ಬರು ಮಕ್ಕಳ ವಿಯೋಗವನ್ನು ಅನುಭವಿಸುತ್ತಿರುವ ತಂದೆ ತಾಯಿಯರ ಭಾವನಾತ್ಮಕ ಹಾಗೂ ಮಾನಸಿಕವಾಗಿ ಅವರು ತಲುಪಿರುವ ಶೋಚನೀಯ ಸ್ಥಿತಿಯನ್ನು ಊಹಿಸಿಕೊಂಡು ಸ್ಪಂದಿಸಬೇಕಾಗಿರುತ್ತದೆ. ಈ ವಾಸ್ತವಾಂಶವನ್ನು ಪರಿಗಣಿಸಿ, ಇಂಥಹ ಸ್ಥಿತಿಯಲ್ಲಿರುವ ತಂದೆ–ತಾಯಿಯರಿಗೆ, ಅವರ ಮಕ್ಕಳಿಗೆ ಬದಲಾಗಿ ಯಾವ ವಸ್ತುವನ್ನು ಯಾರೂ ನೀಡಲಾಗುವುದಿಲ್ಲವೆಂದು ಈ ನ್ಯಾಯಾಲಯವು ಅರಿತು, ಪರಿಹಾರದಲ್ಲಿ ಯಾವುದೇ ಗರಿಷ್ಠ ಮಿತಿಯನ್ನು ನಿಗದಿಪಡಿಸಿರುವುದಿಲ್ಲ. ಹಾಗಾಗಿ, ಈ ನ್ಯಾಯಾಲಯವು, ಅಪೀಲುದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ಪ್ರಸ್ತಾಪಿಸಿದ ವಾದವನ್ನು ನಿರಾಕರಿಸಿರುತ್ತದೆ.

9. ಮೇಲೆ ಹೇಳಿದ ಕಾರಣಗಳಿಗಾಗಿ, ಅಪೀಲನ್ನು ಅಂಗೀಕರಿಸಿ, ದಿನಾಂಕ 5.11.2016ರ ಪ್ರಶ್ನಿತ ಐತೀರ್ಪನ್ನು ಈ ಮುಂದಿನಂತೆ ಮಾರ್ಪಾಡುಗೊಳಿಸಲಾಗಿರುತ್ತದೆ.

| ವಿವಿಧ ಶೀರ್ಷಿಕೆಗಳಡಿಯಲ್ಲಿನ ಪರಿಹಾರ | ನ್ಯಾಯಾಧಿಕರಣವು ನೀಡಿದ ಪರಿಹಾರ | ಈ ನ್ಯಾಯಾಲಯವು ನೀಡಿದ ಪರಿಹಾರ |
|---|---|---|
| ಅವಲಂಬನ ನಷ್ಟ | 12,96,000–00 | 12,96,000–00 |
| ಪ್ರೀತಿ–ವಾತ್ಸಲ್ಯದ ನಷ್ಟ | 1,00,000–00 | 1,00,000–00 |
| ಜೀವಮಾನ ನಿರೀಕ್ಷಾ ನಷ್ಟ | 1,00,000–00 | – |
| ವೈವಾಹಿಕ ಪ್ರತೀಕ್ಷಾ ನಷ್ಟ | 50,000–00 | – |
| ಅಂತಿಮ ಸಂಸ್ಕಾರದ ವೆಚ್ಚ | 25,000–00 | 25,000–00 |
| **ಒಟ್ಟು** | **15,71,000–00** | **14,21,000–00** |

10. ವಿಮಾ ಕಂಪನಿಗೆ, ಮಾನ್ಯ ನ್ಯಾಯಾಧಿಕರಣದೊಂದಿಗೆ ಈ ತೀರ್ಪಿನ ಪ್ರಮಾಣಿತ ಪ್ರತಿಯನ್ನು ಸ್ವೀಕರಿಸಿದ ದಿನಾಂಕದಿಂದ ಎರಡು ವಾರಗಳ ಅವಧಿಯೊಳಗೆ ಕ್ಲೇಮು ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ನಗದೀಕರಣದ ದಿನಾಂಕದವರೆಗೆ ವಾರ್ಷಿಕ ಶೇ.9ರಷ್ಟು ಬಡ್ಡಿ ದರದೊಂದಿಗೆ, ಸಂಪೂರ್ಣವಾಗಿ ಪರಿಹಾರದ ಮೊಬಲಗನ್ನು ಠೇವಣಿ ಮಾಡಲು ನಿರ್ದೇಶಿಸಲಾಗಿರುತ್ತದೆ. ಕ್ಲೇಮುದಾರ – ಪ್ರತ್ಯರ್ಜಿದಾರ ಸಂ.1 ಹಾಗೂ 2 ರವರುಗಳ ಗುರುತುಗಳನ್ನು ಯುಕ್ತವಾಗಿ ಪರಿಶೀಲಿಸಿದ ತರುವಾಯ ಅವರುಗಳ ಹೆಸರಿನಲ್ಲಿ ವಿಮಾ ಕಂಪನಿಯು ಹಾಗೆ ಠೇವಣಿ ಮಾಡಿದ ಮೊಬಲಗನ್ನು ಬಟವಾಡೆ ಮಾಡಲು ಮಾನ್ಯ ನ್ಯಾಯಾಧಿಕರಣಕ್ಕೆ ನಿರ್ದೇಶಿಸಲಾಗಿರುತ್ತದೆ.

ವಿಮಾ ಕಂಪನಿಯು ಮಾನ್ಯ ನ್ಯಾಯಾಧಿಕರಣಕ್ಕೆ ಠೇವಣಿ ಮಾಡಿರುವ ಹಣವನ್ನು ವರ್ಗಾವಣೆ ಮಾಡಿಸಲು ರಿಜಿಸ್ಟ್ರೀಗೆ ನಿರ್ದೇಶಿಸಲಾಗಿರುತ್ತದೆ.

---